# ಫ್ಲಿಪ್ ಕಾರ್ಟ್ ನಿಂದ ಭಾರತದ ಅತಿ ದೊಡ್ಡ  ಫುಲ್ ಫಿಲ್ಮೆಂಟ್ ಕೇಂದ್ರ ಆರಂಭ

- ಪಶ್ಚಿಮ ಬಂಗಾಳದ ಹರಿಂಗಟಾದಲ್ಲಿ ಈ ಕೇಂದ್ರಕ್ಕೆ ಚಾಲನೆ
- ಲಕ್ಷಾಂತರ ಮಾರಾಟಗಾರರು ಮತ್ತು ಕುಶಲಕರ್ಮಿಗಳಿಗೆ ಹೊಸ ಉದ್ಯೋಗಾವಕಾಶ ಮತ್ತು ಮಾರುಕಟ್ಟೆ ಪ್ರವೇಶಕ್ಕೆ ಅವಕಾಶ
- 11,000 ನೇರ ಉದ್ಯೋಗ ಮತ್ತು ಸಾವಿರಾರು ಪರೋಕ್ಷ ಉದ್ಯೋಗ ಸೃಷ್ಟಿ
- ಪಶ್ಚಿಮ ಬಂಗಾಳದಲ್ಲಿ 20,000 ಮಾರಾಟಗಾರರು & ಎಂಎಸ್ಎಂಇಗಳ ಜಾಲ ಬೆಳವಣಿಗೆಗೆ ಸಹಕಾರಿ
- ಈಶಾನ್ಯ ಭಾಗದಲ್ಲಿ ಗ್ರಾಹಕರ ಅಗತ್ಯಗಳನ್ನು ತ್ವರಿತವಾಗಿ ಪೂರೈಸಲು ಪೂರಕ
- ಆರು ಮೆಝನೈನ್ ಲೆವೆಲ್ ಗಳಲ್ಲಿ 5 ಮಿಲಿಯನ್ ಕ್ಯೂಬಿಕ್ ಅಡಿಗಳಷ್ಟು ಸ್ಟೋರೇಜ್ ಸಾಮರ್ಥ್ಯದ ಈ ಹರಿಂಗಟಾ ಫುಲ್ ಫಿಲ್ಮೆಂಟ್ ಸೆಂಟರ್ 2 ಮಿಲಿಯನ್ ಚದರಡಿ ಪ್ರದೇಶದ ಬಿಲ್ಟ್ –ಅಪ್ ಪ್ರದೇಶದಲ್ಲಿ ನಿರ್ಮಾಣ
- ಹರಿಂಗಟಾ ಸೌಲಭ್ಯವು ಇಂಡಿಯನ್ ಗ್ರೀನ್ ಬಿಲ್ಡಿಂಗ್ಸ್ ಕೌನ್ಸಿಲ್ (ಐಜಿಬಿಸಿ)ಯಿಂದ ಪ್ಲಾಟಿನಂ ರೇಟಿಂಗ್ ನೊಂದಿಗೆ ಪ್ರಮಾಣೀಕರಿಸಲ್ಪಟ್ಟಿದೆ. ಈ ಮೂಲಕ ಇಂತಹ ಪ್ರಮಾಣಪತ್ರವನ್ನು ಪಡೆದ ದೇಶದ ಮೊದಲ ಇ-ಕಾಮರ್ಸ್ ಸೌಲಭ್ಯ ಎಂಬ ಹೆಗ್ಗಳಿಕೆಗೆ ಫ್ಲಿಪ್ ಕಾರ್ಟ್ ಪಾತ್ರವಾಗಿದೆ.
- ಆಟೋಮೇಟೆಡ್ ಸ್ಟೋರೇಜ್ ಮತ್ತು ರಿಟ್ರೀವಲ್, ರೊಬೋಟಿಕ್ ಪ್ಯಾಕೇಜಿಂಗ್ ಆರ್ಮ್ಸ್, ಕ್ರಾಸ್ ಬೆಲ್ಟ್ ಸೋರ್ಟರ್ಸ್ ಇತ್ಯಾದಿಯನ್ನು ಹೊಂದಿದೆ

**ಬೆಂಗಳೂರು, ಏಪ್ರಿಲ್ 21 2022**: ಭಾರತದ ದೇಶೀಯ ಇ-ಕಾಮರ್ಸ್ ಮಾರ್ಕೆಟ್ ಪ್ಲೇಸ್ ಆಗಿರುವ ಫ್ಲಿಪ್ ಕಾರ್ಟ್ ಇಂದು ದೇಶದ ಅತಿದೊಡ್ಡ ಫುಲ್ ಫಿಲ್ಮೆಂಟ್ ಸೆಂಟರ್ ಅನ್ನು ಪಶ್ಚಿಮ ಬಂಗಾಳದ ಹರಿಂಗಟಾದಲ್ಲಿ ಆರಂಭಿಸಿದೆ. ಮಾರಾಟಗಾರರು, ಕುಶಲಕರ್ಮಿಗಳು ಮತ್ತು ಯುವ ಉತ್ಸಾಹಿಗಳಿಗೆ ದೊಡ್ಡ ಮಟ್ಟದ ಉದ್ಯಮಶೀಲತೆ ಮತ್ತು ಉದ್ಯೋಗಾವಕಾಶಗಳನ್ನು ದೊರಕಿಸಿಕೊಡುವ ಪ್ರಮುಖ ಹೆಜ್ಜೆ ಇದಾಗಿದೆ. ಪಶ್ಚಿಮ ಬಂಗಾಳ ಮತ್ತು ಈಶಾನ್ಯ ರಾಜ್ಯಗಳ ಯುವಜನರಿಗೆ 11,000 ಕ್ಕೂ ಹೆಚ್ಚು ಉದ್ಯೋಗಾವಕಾಶ ಮತ್ತು 20,000 ಕ್ಕೂ ಅಧಿಕ ಮಾರಾಟಗಾರರಿಗೆ ಬೆಂಬಲ ನೀಡುವ ತಂತ್ರಜ್ಞಾನ ಆಧಾರಿತ ಈ ಕೇಂದ್ರವನ್ನು 2022 ಬೆಂಗಾಲ್ ಗ್ಲೋಬಲ್ ಬ್ಯುಸಿನೆಸ್ ಸಮ್ಮಿಟ್  ನ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಉದ್ಘಾಟಿಸಿದರು. ಈ ವೇಳೆ ಮುಖ್ಯಮಂತ್ರಿಗಳ ಪ್ರಧಾನ ಮುಖ್ಯ ಸಲಹೆಗಾರರಾದ ಅಮಿತ್ ಮಿಶ್ರಾ, ಕೈಗಾರಿಕೆ ಸಚಿವ ಪಾರ್ಥ ಚಟರ್ಜಿ, ಸಾರಿಗೆ ಮತ್ತು ವಸತಿ ಇಲಾಖೆ ಸಚಿವರಾದ ಫಿರಾದ್ ಹಕೀಂ ಹಾಗೂ ಮತ್ತು ಮುಖ್ಯ ಕಾರ್ಯದರ್ಶಿ ಎಚ್.ಕೆ.ದ್ವಿವೇದಿ ಇದ್ದರು.

ಕೋಲ್ಕತ್ತಾದಿಂದ 50 ಕಿಲೋಮೀಟರ್ ದೂರದಲ್ಲಿರುವ ಬಿಗ್ ಬಾಕ್ಸ್ ಸೌಲಭ್ಯವು 110 ಎಕರೆ ವಿಸ್ತೀರ್ಣದಲ್ಲಿದ್ದು, ಸಮಗ್ರ ಪೂರೈಕೆ ಸರಪಳಿಯನ್ನು ನಿರ್ವಹಣೆ ಮಾಡುತ್ತದೆ. ಪಶ್ಚಿಮ ಬಂಗಾಳ ಮತ್ತು ಈಶಾನ್ಯ ಪ್ರದೇಶದ ಸಾವಿರಾರು ಮಾರಾಟಗಾರರನ್ನು ರಾಷ್ಟ್ರೀಯ ಮಾರುಕಟ್ಟೆ ವ್ಯಾಪ್ತಿಗೆ ತರುವ ಮೂಲಕ ಬಲವಾದ ಪೂರೈಕೆ ಸರಪಳಿ ಮೂಲಸೌಕರ್ಯಗಳ ಲಭ್ಯತೆಯೊಂದಿಗೆ ಸ್ಥಳೀಯ ಆರ್ಥಿಕತೆಯನ್ನು ಬಲಪಡಿಸಲು ಇದು ಸಹಾಯ ಮಾಡುತ್ತದೆ ಹಾಗೂ ಬೆಳೆಯುತ್ತಿರುವ ಗ್ರಾಹಕರ ಬೇಡಿಕೆಯನ್ನು ಪೂರೈಸುತ್ತದೆ.

ಆರು ಮೆಝನೈನ್ ಲೆವೆಲ್ ಗಳಲ್ಲಿ 5 ಮಿಲಿಯನ್ ಕ್ಯೂಬಿಕ್ ಅಡಿಗಳಷ್ಟು ಸ್ಟೋರೇಜ್ ಸಾಮರ್ಥ್ಯದ ಈ ಹರಿಂಗಟಾ ಫುಲ್ ಫಿಲ್ಮೆಂಟ್ ಸೆಂಟರ್ 2 ಮಿಲಿಯನ್ ಚದರಡಿ ಪ್ರದೇಶದ ಬಿಲ್ಟ್ –ಅಪ್ ಪ್ರದೇಶವನ್ನು ಹೊಂದಿದೆ. ಆಟೋಮೇಟೆಡ್ ಸ್ಟೋರೇಜ್ ಮತ್ತು ರಿಟ್ರೀವಲ್,

ರೊಬೋಟಿಕ್ ಪ್ಯಾಕೇಜಿಂಗ್ ಆರ್ಮ್ಸ್, ಕ್ರಾಸ್ ಬೆಲ್ಟ್ ಸೋರ್ಟರ್ಸ್ ಮತ್ತು ಶಿಪ್ ಮೆಂಟ್ ಪ್ರಕ್ರಿಯೆಗಳ ಪ್ರಮಾಣವನ್ನು 35%- 50% ರಷ್ಟು ಕಡಿಮೆ ಮಾಡುವ 9 ಕಿಲೋಮೀಟರ್ ಉದ್ದದ ನೆಟ್ ವರ್ಕ್ ಕನ್ವೇಯರ್ ಬೆಲ್ಟ್ ನಂತಹ ಹಲವಾರು ತಂತ್ರಜ್ಞಾನಗಳ ವಿನ್ಯಾಸವನ್ನು ಹೊಂದಿದೆ. ಸಿಸ್ಟಂ ಚಾಲಿತ ಕೆಲಸ ವಿತರಣೆ, ಸ್ಟೋರೇಜ್ ನಲ್ಲಿ ಆಟೋಮೇಶನ್, ಪ್ರಕ್ರಿಯೆ ಮತ್ತು ಹಂಚಿಕೆಯೊಂದಿಗೆ ಈ ಎಫ್ ಸಿಯನ್ನು ಗ್ರಾಹಕರು ಮತ್ತು ಮಾರಾಟಗಾರರ ಪರಿಸರ ವ್ಯವಸ್ಥೆಗಾಗಿ ಮೌಲ್ಯ ರಚನೆಗಾಗಿ ವಿನ್ಯಾಸಗೊಳಿಸಲಾಗಿದೆ.

ಸುಸ್ಥಿರವಾದ ಪೂರೈಕೆ ಜಾಲವನ್ನು ನಿರ್ಮಿಸಲು ಫ್ಲಿಪ್ ಕಾರ್ಟ್ ನ ಬದ್ಧತೆಗೆ ಪುರಾವೆಯಾಗಿ, ಹರಿಂಗಟಾ ಸೌಲಭ್ಯವು ಇಂಡಿಯನ್ ಗ್ರೀನ್ ಬಿಲ್ಡಿಂಗ್ಸ್ ಕೌನ್ಸಿಲ್ (ಐಜಿಬಿಸಿ)ಯಿಂದ ಪ್ಲಾಟಿನಂ ರೇಟಿಂಗ್ ನೊಂದಿಗೆ ಪ್ರಮಾಣೀಕರಿಸಲ್ಪಟ್ಟಿದೆ. ಈ ಮೂಲಕ ಇಂತಹ ಪ್ರಮಾಣಪತ್ರವನ್ನು ಪಡೆದ ದೇಶದ ಮೊದಲ ಇ-ಕಾಮರ್ಸ್ ಸೌಲಭ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಐಜಿಬಿಸಿ ಗ್ರೀನ್ ಲಾಜಿಸ್ಟಿಕ್ ಪಾರ್ಕ್ ಗಳು ಮತ್ತು ವೇರ್ ಹೌಸ್ ರೇಟಿಂಗ್ ಸಿಸ್ಟಂ ಆಗಿದೆ.

**ಈ ಸಂದರ್ಭದಲ್ಲಿ ಮಾತನಾಡಿದ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು**, ``ಭಾರತದ ಇ-ಕಾಮರ್ಸ್ ಲಾಜಿಸ್ಟಿಕ್ ಉದ್ಯಮವು ಹರಿಂಗಟಾ ದಲ್ಲಿ ಫ್ಲಿಪ್ ಕಾರ್ಟ್ ನ ಅತ್ಯಾಧುನಿಕ ಫುಲ್ ಫಿಲ್ಮೆಂಟ್ ಕೇಂದ್ರವನ್ನು ಆರಂಭಿಸುವುದರೊಂದಿಗೆ ಅಭಿವೃದ್ಧಿಯಲ್ಲಿ ದಾಪುಗಾಲು ಇಡುತ್ತಿರುವ ಪಶ್ಚಿಮ ಬಂಗಾಳವು ಈಗ ದೇಶದ ಅತಿದೊಡ್ಡ ಫುಲ್ ಫಿಲ್ಮೆಂಟ್ ಕೇಂದ್ರಗಳಲ್ಲಿ ಒಂದು ಎನಿಸಿರುವುದು ಹೆಮ್ಮೆಯ ವಿಚಾರವಾಗಿದೆ. ಈ ಸಾಧನೆಯನ್ನು ಸಾಧಿಸುವಲ್ಲಿ ನಾನು ಫ್ಲಿಪ್ ಕಾರ್ಟ್ ನ ತಂಡವನ್ನು ಅಭಿನಂದಿಸುತ್ತೇನೆ. ಇದರಿಂದ ಈ ಪ್ರದೇಶ ಮತ್ತು ನಾಗರಿಕರ ಆರ್ಥಿಕ ಅಭಿವೃದ್ಧಿಗೆ ಗಣನೀಯವಾದ ಕೊಡುಗೆಯನ್ನು ನೀಡುತ್ತದೆ. ದೇಶದಲ್ಲಿ ಸುಸ್ಥಿರ ಮತ್ತು ತಂತ್ರಜ್ಞಾನ ಶಕ್ತಗೊಂಡ ವೇರ್ ಹೌಸ್ ಮೂಲ ಸೌಕರ್ಯ ಅಭಿವೃದ್ಧಿಗೆ ಉದ್ಯಮದಲ್ಲಿ ಹೊಸ ಶಕೆ ಆರಂಭಿಸುತ್ತದೆ. ಪ್ರಗತಿಪರವಾದ ರಾಜ್ಯವಾಗಿರುವ ಪಶ್ಚಿಮ ಬಂಗಾಳವು ಹೊಸ ಹೂಡಿಕೆಗಳನ್ನು ಮಾಡಲು ಅನುಕೂಲಕರವಾದ ವಾತಾವರಣವನ್ನು ಸೃಷ್ಟಿಸುವಲ್ಲಿ ಮುಂಚೂಣಿಯಲ್ಲಿದೆ' ' ಎಂದು ಹೇಳಿದರು.

**ಫ್ಲಿಪ್ ಕಾರ್ಟ್ ಗ್ರೂಪ್ ನ ಮುಖ್ಯ ಕಾರ್ಯಕಾರಿ ಅಧಿಕಾರಿ ಕಲ್ಯಾಣ್ ಕೃಷ್ಣಮೂರ್ತಿ ಅವರು ಮಾತನಾಡಿ**, ``ಮಾರಾಟಗಾರರು, ಗ್ರಾಹಕರು, ಕುಶಲಕರ್ಮಿಗಳು, ಕಿರಾಣಗಳು ಮತ್ತು ರೈತ ಸಮುದಾಯದ ಪರಿಸರ ವ್ಯವಸ್ಥೆಗೆ ಹಂಚಿಕೆಯ ಮೌಲ್ಯವನ್ನು ರಚಿಸುವ ಸಂದರ್ಭದಲ್ಲಿ ಇ-ಕಾಮರ್ಸ್ ಪ್ರತಿಯೊಬ್ಬ ಭಾರತೀಯನನ್ನು ನಿಜವಾಗಿಯೂ ಸಂಪರ್ಕಿಸುವ ಶಕ್ತಿಯನ್ನು ಹೊಂದಿದೆ. ಲಕ್ಷಾಂತರ ಸಣ್ಣ ಮತ್ತು ದೊಡ್ಡ ವ್ಯವಹಾರಗಳನ್ನು ಸಂಪರ್ಕಿಸಲು ಬಲವಾದ ಪೂರೈಕೆ ಜಾಲವು ಬೆನ್ನೆಲುಬಾಗಿದೆ ಹಾಗೂ ಸ್ವದೇಶಿ ಇ-ಕಾಮರ್ಸ್ ಮಾರುಕಟ್ಟೆಯಾಗಿ ದೇಶದ ಆರ್ಥಿಕ ಬೆಳವಣಿಗೆಗೆ ಈ ಅವಕಾಶಗಳನ್ನು ಅನ್ಲಾಕ್ ಮಾಡಲು ಮೂಲಸೌಕರ್ಯ, ತಂತ್ರಜ್ಞಾನ ಮತ್ತು ಪ್ರತಿಭೆಗಳಲ್ಲಿ ಹೂಡಿಕೆ ಮಾಡಲು ನಾವು ಬದ್ಧರಾಗಿದ್ದೇವೆ. ಹರಿಂಗಟಾದಲ್ಲಿನ ಫುಲ್ ಫಿಲ್ಮೆಂಟ್ ಕೇಂದ್ರದ ಪ್ರಾರಂಭದಿಂದ ಪೂರೈಕೆ ಜಾಲದ ಮೂಲಸೌಕರ್ಯವನ್ನು ಮತ್ತಷ್ಟು ಬಲಪಡಿಸುತ್ತದೆ ಹಾಗೂ ದೇಶದಲ್ಲಿ ತಂತ್ರಜ್ಞಾನ ಕೇಂದ್ರಿತ ಆಧುನಿಕ ವೇರ್ ಹೌಸ್ ಮೂಲಸೌಕರ್ಯಗಳ ರಚನೆಯಲ್ಲಿ ಪ್ರಮುಖ ಮೈಲುಗಲ್ಲಾಗಿದೆ. ಇದು ನಮ್ಮ ಜನರಿಗೆ ಮತ್ತು ವಿಶ್ವಕ್ಕೆ ಒಳ್ಳೆಯದನ್ನು ಮಾಡಲು ನಮ್ಮ ಕಾರ್ಯಾಚರಣೆಗಳ ಶಕ್ತಿಯನ್ನು ಸಂಯೋಜನೆ ಮಾಡಲು ನಮ್ಮ ಅತ್ಯಂತ ಸಮರ್ಥನೀಯ ಸೌಲಭ್ಯಗಳಲ್ಲಿ ಒಂದಾಗಿದೆ ಎಂದು ನಾವು ಸಂತೋಷಪಡುತ್ತೇವೆ' ' ಎಂದರು.

**ಪಶ್ಚಿಮ ಬಂಗಾಳ ಸರ್ಕಾರದ ಕೈಗಾರಿಕೆ, ವಾಣಿಜ್ಯ ಮತ್ತು ಉದ್ದಿಮೆ ಖಾತೆ ಸಚಿವ ಪಾರ್ಥ ಚಟರ್ಜಿ ಅವರು ಮಾತನಾಡಿ**, "ಪಶ್ಚಿಮ ಬಂಗಾಳದಲ್ಲಿ ಆರ್ಥಿಕ ಬೆಳವಣಿಗೆಗೆ ಬಂಡವಾಳ ಹೂಡಿಕೆಗೆ ಪೂರಕವಾದ ವಾತಾವರಣ ನಿರ್ಮಾಣ ಮಾಡುವಲ್ಲಿ ನಮ್ಮ ಸರ್ಕಾರ ಬದ್ಧವಾಗಿದೆ. ಪೂರೈಕೆ ಜಾಲದ ಮೂಲಸೌಕರ್ಯ, ಜನತೆ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಹೂಡಿಕೆ ಮಾಡುವಲ್ಲಿ ಫ್ಲಿಪ್ ಕಾರ್ಟ್ ರಾಜ್ಯದೊಂದಿಗೆ ದೀರ್ಘಕಾಲದ ಪಾಲುದಾರ ಸಂಸ್ಥೆಯಾಗಿರುವುದು ನಮಗೆ ಸಂತಸ ತಂದಿದೆ. ಹರಿಂಗಾಟದಲ್ಲಿ ಫ್ಲಿಪ್ ಕಾರ್ಟ್ ವಿನೂತನವಾದ ಫುಲ್ ಫಿಲ್ಮೆಂಟ್ ಕೇಂದ್ರವನ್ನು ಸ್ಥಾಪನೆ ಮಾಡಿರುವುದು ನಮ್ಮ ಬಂಡವಾಳ ಹೂಡಿಕೆ ಸ್ನೇಹಿ ನೀತಿಗಳಿಗೆ ಸಾಕ್ಷಿಯಾಗಿದೆ" ಎಂದು ಹೇಳಿದರು

2019 ರಲ್ಲಿ ಆರಂಭವಾದ ಈ ಸೌಲಭ್ಯದ ಕಾಮಗಾರಿ ಎರಡು ವರ್ಷಗಳಲ್ಲಿ ಪೂರ್ಣಗೊಂಡಿದೆ. 2021 ರ ಅಕ್ಟೋಬರ್ ನಲ್ಲಿ ಕಾಮಗಾರಿ ಪೂರ್ಣಗೊಂಡಿದ್ದು, ಕಾಮಗಾರಿಯಲ್ಲಿ ವಿವಿಧ ತಂತ್ರಜ್ಞಾನಗಳನ್ನು ಮತ್ತು ಸುಸ್ಥಿರವಾದ ಕ್ರಮಗಳನ್ನು ಅಳವಡಿಸಿಕೊಳ್ಳಲಾಗಿದೆ.

**About the Flipkart Group**

The Flipkart Group is one of India's leading digital commerce entities and includes group companies Flipkart, Myntra, Flipkart Wholesale, Flipkart Health+ and Cleartrip. The Group is also a majority shareholder in PhonePe, one of the leading Payments Apps in India.

Started in 2007, Flipkart has enabled millions of consumers, sellers, merchants, and small businesses to be a part of India's digital commerce revolution, with a registered customer base of more than 400 million, offering over 150 million products across 80+ categories. Our efforts to democratize commerce in India, drive access and affordability, delight customers, create lakhs of jobs in the ecosystem, and empower generations of entrepreneurs and MSMEs have inspired us to innovate on many industry firsts. Flipkart is known for pioneering services such as Cash on Delivery, No Cost EMI and easy returns – customer-centric innovations have made online shopping more accessible and affordable for millions of Indians. Together with its group companies, Flipkart is committed to transforming commerce in India through technology.

For more information, please contact media@flipkart.com